<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>
<u>ಘನ ನ್ಯಾಯಾಲಯದಲ್ಲಿ</u>

<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 85/2013</u>

ದಿನಾಂಕಃ 23.12.2021
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪ್ರಾ.ಸಾಃ 5 (ಚಾ.ಸಾ.4)

| | | |
|---|---|---|
| ಹೆಸರು | ಃ | ಬಿ.ಶ್ರೀರಾಮರೆಡ್ಡಿ |
| ತಂದೆಯ ಹೆಸರು | ಃ | ಲೇ.ವೆಂಕಟಸ್ವಾಮಿ |
| ವಯಸ್ಸು | ಃ | 67 ವರ್ಷ |
| ಉದ್ಯೋಗ | ಃ | ನಿವೃತ್ತ ಜಿಲ್ಲಾಧಿಕಾರಿ |
| ವಾಸ ಸ್ಥಳ | ಃ | ಬೆಂಗಳೂರು |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>

ನಾನು 2013 ರಲ್ಲಿ ರಾಮನಗರದ ಜಿಲ್ಲಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ತಾಃ05.06.2012 ರಂದು ಬೆಂಗಳೂರಿನ ಕರ್ನಾಟಕ ಲೋಕಾಯುಕ್ತ ಕಚೇರಿಯಿಂದ ಒಂದು ಪತ್ರ ಬಂದಿದ್ದು, ಆಗ ನಮ್ಮ ಇಲಾಖೆಯಲ್ಲಿ ರಾಜಸ್ವ ನಿರೀಕ್ಷಕರಾಗಿದ್ದ – ಸಿ.ನಾಗರಾಜು ಇವರ ವಿರುದ್ಧ ಅಭಿಯೋಜನಾ ಮಂಜೂರಾತಿ ಕೋರಿದ್ದರು. ಲೋಕಾಯುಕ್ತ ಕಚೇರಿಯಿಂದ ಪತ್ರದೊಂದಿಗೆ ದೂರು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಟ್ರ್ಯಾಪ್ ಪಂಚನಾಮೆ, ಆರೋಪಿತರ ಸಮಜಾಯಿಷಿ, ಸಾಕ್ಷಿದಾರರ ಹೇಳಿಕೆಗಳು, ಕೃತ್ಯ ನಡೆದ ಸ್ಥಳದ ನಕಾಶೆ ಮತ್ತು ರಾಸಾಯನಿಕ ವರದಿ ಇವುಗಳನ್ನು ಕಳುಹಿಸಿಕೊಟ್ಟಿದ್ದರು.

3. ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ನಾನು ಕೂಲಂಕುಷವಾಗಿ ಪರಿಶೀಲಿಸಿ ಆರೋಪಿತರ ವಿರುದ್ಧ ಮೇಲ್ನೋಟಕ್ಕೆ ಆರೋಪ ನಿಜ ಎಂದು ಕಂಡು

ಬಂದಿದ್ದರಿಂದ ಈ ಆರೋಪಿತರ ವಿರುದ್ಧ ಅಭಿಯೋಜನಾ ಮಂಜೂರಾತಿಯನ್ನು ತಾಃ **16.02.2013** ರಂದು ನೀಡಿರುತ್ತೇನೆ.

**4.** ನಾನು ಆರೋಪಿತರ ವಿರುದ್ಧ ನೀಡಿದ ಅಭಿಯೋಜನಾ ಮಂಜೂರಾತಿಯನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ.**38** ಎಂತಲೂ ಸಾಕ್ಷಿದಾರರ ಸಹಿಯನ್ನು ನಿಪಿ.**38**(ಎ) ಎಂದು ಗುರುತಿಸಲಾಯಿತು.

**5.** ನನಗೆ ಆರೋಪಿಯನ್ನು ಕೆಲಸದಿಂದ ತೆಗೆದು ಹಾಕುವ ಹಾಗು ನೇಮಕ ಮಾಡುವ ಅಧಿಕಾರ ಇದ್ದಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಎಂ.,ವಕೀಲರಿಂದಃ</u>**

**6.** ದೂರು ಕೊಡುವ ಕಾಲಕ್ಕೆ ಪಿರ್ಯಾದಿಯ ಅತ್ತೆ ಮತ್ತು ನಾದಿನಿಯರಿಗೆ ಸಂಬಂಧಪಟ್ಟ ಕೆಲಸ ಆರೋಪಿಯ ಬಳಿ ಬಾಕಿ ಇತ್ತೋ, ಇಲ್ಲವೋ ಎನ್ನುವುದನ್ನು ನಾನು ಪರಿಶೀಲಿಸಿರುವುದಿಲ್ಲ.

**7.** ಲಂಚ ಕೇಳಲು ಆಧಾರವಾದ ಕಡತದೊಂದಿಗೆ ನನಗೆ ಸಲ್ಲಿಸಿದ್ದ ಪುಟ ಸಂಖ್ಯೆ **58** ರಿಂದ **82** ರವರೆಗಿನ ದಾಖಲಾತಿಗಳನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ದಾಖಲಾತಿಗಳನ್ವಯ **1** ನೇ ಆರೋಪಿ ಪಿರ್ಯಾದಿಯ ಕುಟುಂಬದವರಿಗೆ ಸಂಬಂಧಪಟ್ಟ ಕೆಲಸವನ್ನು ಎಂದು ಮುಗಿಸಿದ್ದ ಎಂದು ಕಂಡು ಬಂದಿತು ಅಂದರೆ ಸಾಕ್ಷಿ ಸದರಿ ಕೆಲಸ ಬಾಕಿ ಇದ್ದಿತು ಎಂದು ಕಂಡು ಬಂದಿತು ಎಂದು ನುಡಿದಿದ್ದಾರೆ.

**8.** ಮ್ಯುಟೇಶನನ್ನು Accept ಮಾಡುವುದು **1** ನೇ ಆರೋಪಿಯ ಕರ್ತವ್ಯಗಳಲ್ಲಿ ಒಂದು ಅಂದರೆ ಸರಿ. ನಮ್ಮ ಕಚೇರಿಯ ದಾಖಲೆಗಳನ್ವಯ ತಾಃ**06.12.2010** ರಂದೇ ಪಿರ್ಯಾದಿಯ ಕುಟುಂಬದವರಿಗೆ ಸಂಬಂಧಪಟ್ಟ ಆಸ್ತಿಯ ಮ್ಯುಟೇಶನ್ ಅಂಗೀಕಾರವಾಗಿದೆ ಅಂದರೆ ಸಾಕ್ಷಿ ಎಂ.ಆರ್ ರಿಜಿಸ್ಟರ್ ಎಕ್ಸಟ್ರಾಕ್ಟನಲ್ಲಿರುವ ಸಹಿಯನ್ನು ಪರಿಶೀಲಿಸದೇ ನಾನು ಆ ಬಗ್ಗೆ ಹೇಳಲಾರೆ ಎಂದು ಸಾಕ್ಷಿ ನುಡಿದಿದ್ದಾರೆ.

**9.** **2010** ರಲ್ಲಿ **1** ನೇ ಆರೋಪಿ ಮಾಗಡಿ ಸೋಲೂರು ಹೋಬಳಿಯ ಕಂದಾಯ ನಿರೀಕ್ಷಕರು ಆಗಿದ್ದರು ಅಂದರೆ ಸರಿ. ಲೋಕಾಯುಕ್ತ ಕಚೇರಿಯಿಂದ

ಕಳುಹಿಸಿದ ದಾಖಲೆಗಳನ್ನು ಪರಿಶೀಲಿಸುವಾಗ ನಾನು ಸದರಿ ಎಂ.ಆರ್ ರಿಜಿಸ್ಟರ್ ಎಕ್ಸಟ್ರಾಕ್ಟ ಇದ್ದಿತ್ತೋ ಇಲ್ಲವೋ ಎಂದು ಹಾಗು ಅದರಲ್ಲಿರುವ ಸಹಿಯನ್ನು ಪರಿಶೀಲಿಸಿರುವುದಿಲ್ಲ.

**10.** ನಾನು ಮೇಲೆ ಹೇಳಿದ ಪುಟ ಸಂಖ್ಯೆ **52** ರಿಂದ **82** ರವರೆಗಿನ ದಾಖಲಾತಿಗಳನ್ನು ಪರಶೀಲಿಸಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಗಳನ್ನು ಪರಿಶೀಲಿಸದೇ, ಯಾಂತ್ರಿಕವಾಗಿ ಲೋಕಾಯುಕ್ತ ಅಧಿಕಾರಿಗಳ ಕೋರಿಕೆಯ ಮೇರೆಗೆ ಅಭಿಯೋಜನಾ ಮಂಜೂರಾತಿಯನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ.

**11.** ಮೊದಲೇ ಸಿದ್ದಪಡಿಸಿದ ಅಭಿಯೋಜನಾ ಮಂಜೂರಾತಿ ನಮೂನೆಯಲ್ಲಿ ದಿನಾಂಕ ಹಾಗು ಇತರೇ ವಿವರಗಳನ್ನು ತುಂಬಿ ಕೇವಲ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

**12.** ದೂರು ಕೊಡುವ ಕಾಲಕ್ಕೆ ಹಾಗು ಟ್ರಾಪ್ ಆಗುವ ಕಾಲಕ್ಕೆ ಪಿರ್ಯಾದಿಯ ಅತ್ತೆ ಮನೆಯ ಆಸ್ತಿಗೆ ಸಂಬಂಧಪಟ್ಟ ಕೆಲಸ ಸದರಿ ಆರೋಪಿಯ ಬಳಿ ಬಾಕಿ ಇರಲಿಲ್ಲವಾದರೂ ಸಹ ನಾನು ಆರೋಪಿಯ ವಿರುದ್ಧ ತಪ್ಪಾಗಿ ಅಭಿಯೋಜನಾ ಮಂಜೂರಾತಿಯನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ದಾಖಲಾತಿಗಳನು ಪರಿಶೀಲಿಸಿದಾಗ ಸತ್ಯಾಂಶ ಗೊತ್ತಾದರೂ ಸಹ ನಾನು ತಪ್ಪಾಗಿ ಅಭಿಯೋಜನಾ ಮಂಜೂರಾತಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**